ಚುಡಾಯಿಸಿದ. ನೂರೊಂದು ಅಡಿಯ ಮುಕುಟವನ್ನೂ ಧರಿಸಿ ಮೊಕ್ತೇಸರ ಬಾವಿಯ ದಡದಿಂದ ಜೀನ್ಸ್ ಅನ್ನು ಏರಿಸಿ ಮಕ್ಕಳನ್ನು ನೋಡಿ ಕಣ್ಣು ಮಿಟುಕಿಸಿದ. ಪ್ಯಾಂಟಿನ ಜಿಪ್ಪನ್ನು ಎಳೆದು ಭದ್ರಪಡಿಸಿದ. ಅವರು ಬಾಯಿಮುಚ್ಚಿ ನಕ್ಕರು. ಕಾರಿನೊಳಗಿನಿಂದ ಒಬ್ಬಾತ ಬಿಳಿಯನನ್ನು ಏನೋ ಕೇಳಿದ. ಅದಕ್ಕೆ ಅವನು ಗಟ್ಟಿಯಾಗಿ ನಕ್ಕನಷ್ಟೆ. ಟೀ ಶರ್ಟನ್ನು ಜೀನ್ಸ್‌ನೊಳಗೆ ತಳ್ಳಿ ಬಿಳಿಯ ಪಣಿಕ್ಕರನ್ನು ಸಮೀಪಕ್ಕೆ ಕರೆದ. ಅವನು ಜೇಬಿನಿಂದ ಒಂದು ನೋಟನ್ನು ಎಳೆದು ಅವರ ಒರಟು ಅಂಗೈಯಲ್ಲಿಟ್ಟ. ಅಷ್ಟರಲ್ಲಿ ಕಾರು ಹೊರಡುವ ಸದ್ದು ಮಾಡಿತು. ಬಿಳಿಯ ಎಲ್ಲರಿಗೂ ಕೃತಜ್ಞತೆಯಿಂದ ಕೈಬೀಸಿದ. ಬಿಳಿಯ ಹತ್ತಿದ ಕೂಡಲೇ ರೆಕ್ಕೆಗಳು ಮುಚ್ಚಿಕೊಂಡವು. ಸೂರ್ಯ ಕಿರಣಗಳು ಪಸರಿಸಿದ ಆಗಸದಲ್ಲಿ ಒಂದು ಅಲೆಮಾರಿ ಪಕ್ಷಿ ಹಾರುತ್ತಾ ದೂರ ಸರಿಯಿತು. ಮಗ ನೋಡುತ್ತಲೇ ಇದ್ದ. ಕಾರು ಅಷ್ಟರಲ್ಲಾಗಲೇ ಹೈವೇಯನ್ನು ಪ್ರವೇಶಿಸಿತ್ತು. ಬಾಲನ್ ಪಣಿಕ್ಕರ್‌ಗೆ ನಂಬಲಾಗಲಿಲ್ಲ. ಅವರು ಗಾಂಧೀಜಿಯನ್ನು ಹಿಂದೆ ಮುಂದೆಯೆಲ್ಲಾ ಪರಿಶೀಲಿಸಿದರು. ಮಕ್ಕಳು ನೋಟಿನ ಬಳಿ ಬಂದು ಮೇಲೆ ಕೆಳಗೆ ನೋಡಿದರು. ಯಾವುದೇ ಕೋನದಲ್ಲಿ ನೋಡಿದರೂ ಐದು ನೂರು ರೂಪಾಯಿಯೇ! ಅದರ ಒಂದು ಬದಿಯಿಂದ ಆಚೆ ಬದಿಯತ್ತ ನೋಡಿದಾಗ ಜಾನಕಿ ಎಷ್ಟು ಸುಂದರಿಯಾಗಿದ್ದಾಳೆಂದೆನಿಸಿತು. ಪಣಿಕ್ಕರ ಪ್ರತಿ ರೆಂಬೆಗಳಲ್ಲೂ ಹೊಸ ಚಿಗುರುಗಳು ಟಿಸಿಲೊಡೆದವು. ಅವನ ಹೃದಯ ಒಬ್ಬ ಪ್ರಿಯತಮನಂತೆ ಹಾಡತೊಡಗಿತು. ತಕ್ಷಣ ಮಗ ಒಂದು ಸುತ್ತು ಬಂದು ಹುಲಿವೇಷದವನ ಹೆಜ್ಜೆಗಳನ್ನು ಇಡತೊಡಗಿದ.

'ಹೇಲಿನ ಕಾಸು... ಹೇಲಿನ ಕಾಸು' ಒಂದು ವಾದ್ಯಗೋಷ್ಠಿಯಂತೆ ಜಾನಕಿಯ ಧ್ವನಿ ಲಯಬದ್ಧವಾಗಿತ್ತು. ಹಾಗನ್ನುತ್ತಾ ಮಗನ ತಲೆಯನ್ನು ಮೊಟಕಿದಳು. ಅವನು ಅಳತೊಡಗಿದ.

ಅವಳು ಮನೆಯೊಳಗಿನಿಂದ ಚೀಲ ತಂದು ಪಣಿಕ್ಕರಿಗೆ ಕೊಟ್ಟಳು. ಅವನು ಚೀಲ ಹಿಡಿದು ಕೂಡು ರಸ್ತೆಯತ್ತ ನಡೆದ. ಹುಲ್ಲುಗಳು ಬೀಜವನ್ನು ಉದುರಿಸುವಂತೆ ಗಾಳಿ ಬೀಸಿತು. ಅದಕ್ಕೆಲ್ಲಾ ಸಂಪಿಗೆ ಹೂವಿನ ಪರಿಮಳವಿತ್ತು.

'ಈ ಬಡಪಾಯಿಯನ್ನು ಕ್ಷಮಿಸಿ ದೇವರೆ... ತಪ್ಪಾಗಿದೆ ತಂದೆಯೆ...' ಎಂದು ದಾರಿಯುದ್ದಕ್ಕೂ ಪ್ರಾರ್ಥಿಸುತ್ತಲೇ ಪಣಿಕ್ಕರ್ ನಡೆದರು.


### ಸಂತೋಷ್ ಏಚ್ಚಿಕಾನಂ

ಹುಟ್ಟೂರು ಕಾಸರಗೋಡು ಜಿಲ್ಲೆಯ ಬೇಡಡ್ಕ. ಈವರೆಗೆ 10 ಕಥಾಸಂಗ್ರಹಗಳು ಪ್ರಕಟವಾಗಿವೆ. ಕಿರುತೆರೆ ಮತ್ತು ಹಿರಿತೆರೆಗಳಲ್ಲೂ ಸಕ್ರಿಯರು. ಅನೇಕ ಕೃತಿಗಳು ಇಂಗ್ಲಿಷ್ ಮತ್ತು ಇತರ ಭಾರತೀಯ ಭಾಷೆಗಳಿಗೆ ಅನುವಾದಗೊಂಡಿವೆ. 'ಬಿರಿಯಾನಿ' ಕತೆ ವಿವಿಧೆಡೆ ನಾಟಕ ರೂಪದಲ್ಲಿ ಪ್ರದರ್ಶನಗೊಂಡಿದೆ. ಪ್ರಸ್ತುತ ಕೇರಳದ ತ್ರಿಶೂರಿನಲ್ಲಿ ವಾಸವಾಗಿದ್ದಾರೆ.

### ಕೆ.ಕೆ. ಗಂಗಾಧರನ್

ಕೆ.ಕೆ. ಗಂಗಾಧರನ್ ಹುಟ್ಟಿದ್ದು ಕೇರಳದ ಕಾಸರಗೋಡಿನ ಒಂದು ಹಳ್ಳಿಯಲ್ಲಿ. ಬೆಳೆದಿದ್ದು ಕೊಡಗಿನ ಸೋಮವಾರಪೇಟೆಯ ಕಬ್ಬಿಣಸೇತುವೆ ಎಂಬಲ್ಲಿ. ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ಪಡೆದ ಗಂಗಾಧರನ್ ಅವರ ಮಾತೃಭಾಷೆ ಮಲಯಾಳಂ. ಸುಮಾರು 350 ಕತೆಗಳು, ಐದು ಕಾದಂಬರಿಗಳನ್ನು ಅವರು ಅನುವಾದಿಸಿದ್ದಾರೆ. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.